**MAY 21, 2024**

## ALL INDIA RADIO - DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಒಂದು ವರ್ಷ ಕಾಲ,** ತಮ್ಮ ಸರ್ಕಾರವನ್ನು, ಯಶಸ್ವಿಯಾಗಿ ಮುನ್ನಡೆಸಿದ, ಏಳು ಕೋಟಿ ಕನ್ನಡಿಗರಿಗೆ, ಧನ್ಯವಾದಗಳು – ಮುಖ್ಯಮಂತ್ರಿ ಸಿದ್ದರಾಮಯ್ಯ.
- **ಕಾನೂನು ಸುವ್ಯವಸ್ಥೆ** ರಾಜ್ಯದಲ್ಲಿ ಸುದೃಢವಾಗಿದೆ – ಜಿ. ಪರಮೇಶ್ವರ್.
- **ದ್ವಿತೀಯ ಪಿಯು ಪರೀಕ್ಷೆ–2 ಮತ್ತು** ಕೃಷಿ ಪ್ರಾಯೋಗಿಕ ಪರೀಕ್ಷೆ ಫಲಿತಾಂಶದ ನಂತರವೇ, ಸಿ.ಇ.ಟಿ. ಫಲಿತಾಂಶ ಪ್ರಕಟ – ಎಚ್. ಪ್ರಸನ್ನ
- **ಉತ್ತರಕನ್ನಡ ಜಿಲ್ಲೆ ಶಿರಸಿಯ,** ವೃಕ್ಷ ಲಕ್ಷ ಆಂದೋಲನದಿಂದ, ಜೀವ ವೈವಿಧ್ಯ ಜಾಗೃತಿ ಜಾಥಾ.

<><><>

**ಈಗ ವಾರ್ತೆಗಳ ವಿವರ**

<><><>

**ಅಝುರ್‌ಬೈಝಾನ್‌ನ ದುರ್ಗಮ ಬೆಟ್ಟದಲ್ಲಿ,** ಹೆಲಿಕಾಪ್ಟರ್ ಪತನವಾಗಿ ಇರಾನ್ ಅಧ್ಯಕ್ಷ ಇಬ್ರಾಹಿಂ ರಯೀಸಿ, ವಿದೇಶಾಂಗ ಸಚಿವ ಅಬ್ದುಲ್ಲಾ ಹಿಯಾನ್ ಸೇರಿದಂತೆ, ಹಲವರು ಮರಣ ಹೊಂದಿದ್ದಾರೆ ಎಂದು, ರಾಯಿಟರ್ಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ. ಅಗಲಿದ ಗಣ್ಯರಿಗೆ ಗೌರವ ಸೂಚಕವಾಗಿ, ಭಾರತ ಸರ್ಕಾರ, ಇಂದು ಮಂಗಳವಾರ ರಾಷ್ಟ್ರೀಯ ಶೋಕಾಚರಣೆ ಘೋಷಿಸಿದ್ದಾಗಿ, ಕೇಂದ್ರ ಗೃಹ ಸಚಿವಾಲಯ ಪ್ರಕಟಿಸಿದೆ. ಇಂದು, ರಾಷ್ಟ್ರ ಧ್ವಜ ದೇಶಾದ್ಯಂತ ಎಲ್ಲ ಅಧಿಕೃತ ಕಟ್ಟಡಗಳ ಮೇಲೆ ಅರ್ಧ ಮಟ್ಟದಲ್ಲಿ ಹಾರಿಸಲಾಗುತ್ತದೆ. ಯಾವುದೇ ಮನೋರಂಜನಾ ಕಾರ್ಯಕ್ರಮವಿರುವುದಿಲ್ಲ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

<><><>

**ಭಾರತದ ಮಾಜಿ ಪ್ರಧಾನಮಂತ್ರಿ,** ರಾಜೀವ್ ಗಾಂಧಿಯವರ ಪುಣ್ಯ ತಿಥಿ ಇಂದು.
ಮೇ 21, 1991 ರಂದು, ಲಿಬರೇಶನ್ ಟೈಗರ್ಸ್ ಆಫ್ ತಮಿಳ್ ಈಳಂ –ಎಲ್.ಟಿ.ಟಿ.ಇ.ಯ ಆತ್ಮಹತ್ಯಾ ಬಾಂಬರ್‌ನಿಂದ, ಚೆನ್ನೈ ಬಳಿಯ ಶ್ರೀ ಪೆರಂಬದೂರ್ ಎಂಬಲ್ಲಿ, ಅವರು ಹತ್ಯೆಯಾದ, ದಿನವಿಂದು. ಪ್ರತಿ ವರ್ಷ ಮೇ 21 ರಂದು, ದೇಶಾದ್ಯಂತ ರಾಜೀವ್ ಗಾಂಧಿ ಅವರ ಸ್ಮೃತಿಯಲ್ಲಿ, ರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ದಿನವನ್ನು ಆಚರಿಸಲಾಗುತ್ತದೆ.

<><><>

**ತಮ್ಮ ಸರ್ಕಾರವನ್ನು,** ಒಂದು ವರ್ಷಗಳ ಕಾಲ ಯಶಸ್ವಿಯಾಗಿ ಮುನ್ನಡೆಸಿದ, ರಾಜ್ಯದ ಏಳು ಕೋಟಿ ಕನ್ನಡಿಗರಿಗೆ, ತುಂಬು ಹೃದಯದ ಧನ್ಯವಾದಗಳು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾಮಾಜಿಕ ಜಾಲತಾಣ ಎಕ್ಸ್‌ದಲ್ಲಿ ಪೋಸ್ಟ್ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಮೇಲೆ ವಿಶ್ವಾಸವಿಟ್ಟು ಅಭದ್ರತೆಯ ಆತಂಕ ಇರಲೇಬಾರದೆಂದು, ಸ್ಪಷ್ಟವಾದ ಬಹುಮತವನ್ನು ಕೊಟ್ಟು, ಸರ್ಕಾರ ರಚನೆಗೆ ಅವಕಾಶ ಕೊಟ್ಟಿದ್ದು ರಾಜ್ಯದ ಮತದಾರರ ಪ್ರಜ್ಞಾವಂತಿಕೆ ಎಂದು, ತಿಳಿಸಿದ್ದಾರೆ.

<><><>

**ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ,** ಸೋಮವಾರ ಒಂದು ವರ್ಷ ಪೂರ್ಣಗೊಂಡಿತು. ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ, ಸಂಭ್ರಮಾಚಾರಣೆ ಮಾಡದಿರಲು ಸರ್ಕಾರ ನಿರ್ಧರಿಸಿದೆ.

<><><>

**ಬೆಂಗಳೂರಿನ ಪ್ರೆಸ್‌ಕ್ಲಬ್‌ನಲ್ಲಿ** ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧಿಕಾರಕ್ಕೆ ಬಂದ 9 ತಿಂಗಳೊಳಗೆ ಎಲ್ಲ ಖಾತ್ರಿ ಯೋಜನೆಗಳನ್ನು ಜಾರಿಗೊಳಿಸಿದ್ದಾಗಿ ತಿಳಿಸಿದರು.

<><><>

**ರಾಜ್ಯದಲ್ಲಿ 692ಕ್ಕೂ ಹೆಚ್ಚು ರೈತರು** ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರಾಜ್ಯ ಸರ್ಕಾರ, ಕೃಷಿ ಸಾಲ, ಬೆಳೆ ನ ್ಟಕ್ಕೆ ಪರಿಹಾರ ಕೊಡುವ ನಿಟ್ಟಿನಲ್ಲಿ, ಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತಿಲ್ಲ ಎಂದು, ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹಾಗೂ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.
ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಕಳೆದ ಒಂದು ವ ರ್ದಲ್ಲಿ ಒಂದೇ ಒಂದು ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡಿಲ್ಲ. ಬರಗಾಲ ನಿರ್ವಹಣೆಯಲ್ಲಿ, ಸರ್ಕಾರ ಬದ್ಧತೆ ತೋರುತ್ತಿಲ್ಲ ಎಂದು, ದೂರಿದರು.

<><><>

**ಖಾತ್ರಿ ಯೋಜನೆ ಹೊರತು ಪಡಿಸಿ,** ಕಾಂಗ್ರೆಸ್ ಸರ್ಕಾರದ ಸಾಧನೆ ಏನು ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಕಳೆದ ಒಂದು ವ ರ್ದಿಂದ ಸರ್ಕಾರ ರೈತರಲ್ಲಿ ಧೈರ್ಯ ತುಂಬಿದ್ದು ಕಾಣಲೇ ಇಲ್ಲ ಎಂದರು.

<><><>

**ರಾಜ್ಯ ಸರ್ಕಾರ,** ರೈತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ, ಬಳ್ಳಾರಿಯಲ್ಲಿ, ಬಿಜೆಪಿ ರೈತ ಮೋರ್ಚಾ ಮುಖಂಡರು ಪ್ರತಿಭಟನೆ ನಡೆಸಿದರು.

<><><>

**ಹುಬ್ಬಳ್ಳಿಯಲ್ಲಿ ಇತ್ತೀಚೆಗೆ ಹತ್ಯೆಯಾದ** ಯುವತಿ ನೇಹಾ ಹಿರೇಮಠ ಪ್ರಕರಣದ ತನಿಖೆಯನ್ನು, ***ಸಿ.ಐ.ಡಿ.ಗೆ*** ವಹಿಸಿದ್ದು, ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆದಿದೆ. ಅಂಜಲಿ ಅಂಬಿಗೇರ ಕೊಲೆ ಪ್ರಕರಣದ ತನಿಖೆಯನ್ನು, ಸಿ.ಐ.ಡಿ.ಗೆ ಒಪ್ಪಿಸಲು ಸದ್ಯದಲ್ಲೇ ಆದೇಶ ಹೊರಡಿಸಲಾಗುವುದು. ಶೀಘ್ರ ತನಿಖೆ ಪೂರ್ಣಗೊಂಡು, ನೊಂದ ಕುಟುಂಬಗಳಿಗೆ ನ್ಯಾಯ ದೊರಕಲಿದೆ ಎಂದು, ಗೃಹ ಖಾತೆ ಸಚಿವ, ಡಾಕ್ಟರ್ ಜಿ. ಪರಮೇಶ್ವರ ಭರವಸೆ ನೀಡಿದ್ದಾರೆ. ಹುಬ್ಬಳ್ಳಿಯಲ್ಲಿ, ಅಂಜಲಿ ಅಂಬಿಗೇರ ಹಾಗೂ ನೇಹಾ ಹಿರೇಮಠ ಅವರ ಮನೆಗಳಿಗೆ ತೆರಳಿ, ಕುಟುಂಬಸ್ಥರಿಂದ ಮಾಹಿತಿ ಪಡೆದು, ಸಾಂತ್ವನ ಹೇಳಿದರು.
ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಕಾನೂನು ಸುವ್ಯವಸ್ಥೆ ರಾಜ್ಯದಲ್ಲಿ ಸುದೃಢವಾಗಿದೆ ಎಂದರು.

<><><>

**ಹುಬ್ಬಳ್ಳಿ ಧಾರವಾಡ ಪೊಲೀಸ್** ಕಮಿ ´ನರೇಟ್‌ನ ಕಾನೂನು, ಸುವ್ಯವಸ್ಥೆ ವಿಭಾಗದ ನೂತನ ಉಪ ಪೊಲೀಸ್ ಆಯುಕ್ತರಾಗಿ, ಕುಶಲ್ ಚೌಕ್ಸೆ, ಅಧಿಕಾರ ವಹಿಸಿಕೊಂಡಿದ್ದಾರೆ.

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಉತ್ತರಕನ್ನಡ ಜಿಲ್ಲೆ, ಶಿರಸಿಯ ವೃಕ್ಷ ಲಕ್ಷ ಆಂದೋಲನ,** ಜೀವ ವೈವಿಧ್ಯ ಮಂಡಳಿ ಹಾಗೂ ವಿವಿಧ ವನವಾಸಿ ಮತ್ತು ರೈತ ಬಂಧುಗಳು, ಅಂತಾರಾಷ್ಟ್ರೀಯ ಜೀವವೈವಿಧ್ಯ ದಿನದ ಹಿನ್ನೆಲೆ, ಜೀವವೈವಿಧ್ಯ ಜಾಗೃತಿ ಜಾಥಾದಲ್ಲಿ ಪಾಲ್ಗೊಳ್ಳಲಿದ್ದಾರೆ. ಉತ್ತರಕನ್ನಡ ಜಿಲ್ಲೆ ಹಾಗೂ ಶಿವಮೊಗ್ಗ ಜಿಲ್ಲೆಯ 8 ನದಿ ಮೂಲಗಳಿಗೆ, ಇಂದು ಮತ್ತು ನಾಳೆ ಭೇಟಿ ನೀಡಿ, ಜೀವವೈವಿಧ್ಯ ಅಭ್ಯಸಿಸಲಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಪರಿಸರ ಕಾರ್ಯಕರ್ತ ಅನಂತ ಹೆಗಡೆ, ಅಶೀಸರ.

**<><><>**

**ಅನಂತ ಹೆಗಡೆ, ಆಶೀಸರ ಧ್ವನಿ 45 ಸೆಕೆಂದುಗಳು**

**<><><>**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ** ನಡೆಸಿದ, ದ್ವಿತೀಯ ಪಿಯು ಪರೀಕ್ಷೆ – 2ರ, ಫಲಿತಾಂಶ ಇಂದು ಮಧ್ಯಾಹ್ನ 3 ಗಂಟೆಗೆ, ಅಧಿಕೃತ ಜಾಲತಾಣ karresults.nic.in ನಲ್ಲಿ ಪ್ರಕಟವಾಗಲಿದೆ.

ಕಳೆದ ಏಪ್ರಿಲ್ 29 ರಿಂದ, ಮೇ 16ರ ವರೆಗೆ, ಪರೀಕ್ಷೆ ನಡೆಸಲಾಗಿತ್ತು. 1ಲಕ್ಷದ 49 ಸಾವಿರ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

<><><>

**ದ್ವಿತೀಯ ಪಿಯು ಪರೀಕ್ಷೆ–2 ಮತ್ತು ಕೃಷಿ ಪ್ರಾಯೋಗಿಕ** ಪರೀಕ್ಷೆ ಫಲಿತಾಂಶ ಘೋಷಣೆಯ ನಂತರವೇ, ಸಾಮಾನ್ಯ ಪ್ರವೇಶ ಪರೀಕ್ಷೆ –ಸಿ.ಇ.ಟಿ. ಫಲಿತಾಂಶ ಪ್ರಕಟವಾಗಲಿದೆ ಎಂದು, ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

<><><>

**ರಾಜ್ಯದ ಎಲ್ಲ ಶಾಲೆಗಳ 5, 8 ಹಾಗೂ 9ನೇ ತರಗತಿ ವಿದ್ಯಾರ್ಥಿಗಳನ್ನು,** ಮುಂದಿನ ಶೈಕ್ಷಣಿಕ ತರಗತಿಯಲ್ಲಿ ಮುಂದುವರೆಸಲು ಅವಕಾಶ ಕಲ್ಪಿಸುವಂತೆ ಸೂಚಿಸಿ, ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಪರೀಕ್ಷಾ ಮಂಡಳಿಯ ಮಾಹಿತಿ ಪ್ರಕಾರ, ಈ ತರಗತಿಗಳಲ್ಲಿ ಒಟ್ಟಾರೇ 27 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿದ್ದರು.

<><><>

**ಬಿಸಿಲಿನ ಬೇಗೆಯಿಂದ,** ಪ್ರಾಣಿ–ಪಕ್ಷಿ ಸಂಕುಲವನ್ನು ಸಂರಕ್ಷಿಸಲು, ಮೈಸೂರು ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ, ಸ್ಪ್ರಿಂಕ್ಲರ್, ಫಾಗರ್ ಹಾಗೂ ದೇಹದಲ್ಲಿ ನೀರಿನ ಅಂಶ ಹೆಚ್ಚಿಸುವ ಆಹಾರ ಪೂರೈಸಲಾಗುತ್ತಿದೆ. ಮೃಗಾಲಯದಲ್ಲಿರುವ ಪ್ರಾಣಿಗಳ ವಿಶ್ರಾಂತಿ ತಾಣದಲ್ಲಿ, ದಿನಕ್ಕೆ ಮೂರು ಬಾರಿ ಸ್ಪ್ರಿಂಕ್ಲರ್ ಮೂಲಕ, ನೀರನ್ನು ಚಿಮುಕಿಸಿ ವಾತಾವರಣ ತಂಪಾಗಿಸಲಾಗುತ್ತಿದೆ. ಜಿನುಗುವ ನೀರಿಗೆ ಮೈಯೊಡ್ಡಿ ಪ್ರಾಣಿ–ಪಕ್ಷಿಗಳು ಆನಂದಿಸುತ್ತಿವೆ. ಅವುಗಳ ಮನೆಗಳಿಗೆ ಫಾಗರ್ ಅಳವಡಿಸಲಾಗಿದೆ.

<><><>

**ಪ್ರಾಣಿಪ್ರಿಯರಿಗಾಗಿ,** ಇಂದು ಮೃಗಾಲಯ ವೀಕ್ಷಣೆಗೆ ತೆರೆದಿರಲಿದೆ.

<><><>

**ಶಿವಮೊಗ್ಗದ ತ್ಯಾವರೆಕೊಪ್ಪ ಹುಲಿ**–ಸಿಂಹ ಧಾಮ, ಪ್ರವಾಸಿಗರ ವೀಕ್ಷಣೆಗಾಗಿ ಇಂದು ತೆರೆದಿರಲಿದೆ.

<><><>

**ಮೈಸೂರು ತಾಲೂಕಿನ ಡಿ.ಸಾಲುಂಡಿ ಗ್ರಾಮದಲ್ಲಿ,** ಕಲುಷಿತ ನೀರು ಸೇವಿಸಿ, 15 ಜನ ಅಸ್ವಸ್ಥರಾಗಿದ್ದಾರೆ. ಇಬ್ಬರು ಮಕ್ಕಳು ಹಾಗೂ ಮೂವರು ಮಹಿಳೆಯರು ಸೇರಿ, ಒಟ್ಟು ಐವರ ಸ್ಥಿತಿ ಗಂಭೀರವಾಗಿದೆ. ಮೈಸೂರಿನ ನಾನಾ ಖಾಸಗಿ ಆಸ್ಪತ್ರೆಗಳಲ್ಲಿ ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ.

<><><>

**ಮಂಡ್ಯ ಜಿಲ್ಲೆಯಲ್ಲಿ 2023–24ನೇ ಸಾಲಿನಲ್ಲಿ,** 180 ಬಾಲ್ಯ ವಿವಾಹ ಪ್ರಕರಣಗಳು ವರದಿಯಾಗಿದ್ದು, 105 ಬಾಲ್ಯ ವಿವಾಹಗಳನ್ನು ತಡೆಯಲಾಗಿದೆ. 75 ಬಾಲ್ಯ ವಿವಾಹ ಪ್ರಕರಣಗಳ ಮೇಲೆ, ಎಫ್.ಐ.ಆರ್ ದಾಖಲಿಸಿ, ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು, ಜಿಲ್ಲಾಧಿಕಾರಿ ಡಾಕ್ಟರ್ ಕುಮಾರ ತಿಳಿಸಿದ್ದಾರೆ. ಮಕ್ಕಳ ರಕ್ಷಣಾ ಸಮಿತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳ ಸಭೆ ನಡೆಸಿದ ಅವರು, ಬಾಲ್ಯ ವಿವಾಹ ಸಮಾಜದ ಪಿಡುಗಾಗಿದ್ದು, ಇದನ್ನು ತಡೆಗಟ್ಟಲು, ಜನ ಜಾಗೃತಿ ಕಾರ್ಯಕ್ರಮ ಆಯೋಜಿಸುವಂತೆ, ಸೂಚಿಸಿದರು.

<><><>

**ಕೊಪ್ಪಳ ನಗರದ, ಕೇಂದ್ರಿಯ ಬಸ್ ನಿಲ್ದಾಣದ ಮುಂದಿನ,** ಅಂಗಡಿಗಳಿಗೆ ಆಕಸ್ಮಿಕ ಬೆಂಕಿ ತಗುಲಿ, ಕೋಟ್ಯಂತರ ರೂಪಾಯಿ ಬೆಳೆ ಬಾಳುವ ವಸ್ತುಗಳು, ಆಹುತಿಯ ಬೆಂಕಿ ನಂದಿಸಲು ಅಗ್ನಿ ಶಾಮಕ ದಳದ ಸಿಬ್ಬಂದಿ, ಹರಸಾಹಸ ಪಟ್ಟರು. ಜಿಲ್ಲಾಧಿಕಾರಿ ನಳಿನ್ ಅತುಲ್ ಸ್ಥಳಕ್ಕೆ ಆಗಮಿಸಿ, ಪರಿಶೀಲಿಸಿದರು.

<><><>

**ಭಾರತೀಯ ವಾಯುಪಡೆಯಲ್ಲಿ** ಅಗ್ನಿವೀರ್ ವಾಯು ಯೋಜನೆಯಡಿ, ಸಂಗೀತಗಾರರ ಹುದ್ದೆಗಳ ನೇಮಕಾತಿಗೆ, ಜಾಥಾ ಆಯೋಜಿಸಲಾಗಿದೆ. ನೇಮಕಾತಿ ರ್‍ಯಾಲಿಯಲ್ಲಿ ಪಾಲ್ಗೊಳ್ಳಲು ಜಾಲತಾಣ, agnipath vayu.cdac.in ಮೂಲಕ, ಜೂನ್ 5 ರೊಳಗೆ ಹೆಸರು ನೋಂದಾಯಿಸಬಹುದು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಒಂದು ವರ್ಷ ಕಾಲ,** ತಮ್ಮ ಸರ್ಕಾರವನ್ನು, ಯಶಸ್ವಿಯಾಗಿ ಮುನ್ನಡೆಸಿದ, ಏಳು ಕೋಟಿ ಕನ್ನಡಿಗರಿಗೆ, ಧನ್ಯವಾದಗಳು – ಮುಖ್ಯಮಂತ್ರಿ ಸಿದ್ದರಾಮಯ್ಯ.
- **ಕಾನೂನು ಸುವ್ಯವಸ್ಥೆ** ರಾಜ್ಯದಲ್ಲಿ ಸುದೃಢವಾಗಿದೆ – ಜಿ. ಪರಮೇಶ್ವರ್.
- **ದ್ವಿತೀಯ ಪಿಯು ಪರೀಕ್ಷೆ–2 ಮತ್ತು** ಕೃಷಿ ಪ್ರಾಯೋಗಿಕ ಪರೀಕ್ಷೆ ಫಲಿತಾಂಶದ ನಂತರವೇ, ಸಿ.ಇ.ಟಿ. ಫಲಿತಾಂಶ ಪ್ರಕಟ – ಎಚ್. ಪ್ರಸನ್ನ
- **ಉತ್ತರಕನ್ನಡ ಜಿಲ್ಲೆ ಶಿರಸಿಯ,** ವೃಕ್ಷ ಲಕ್ಷ ಆಂದೋಲನದಿಂದ, ಜೀವ ವೈವಿಧ್ಯ ಜಾಗೃತಿ ಜಾಥಾ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>

**ಹರ್ಷ**

.